HAVE A HOME A CAN FIN HOME
Can Fin Homes Ltd
(Sponsor : CANARA BANK)
HOME LOANS ✦ DEPOSITS
Translating Dreams into Reality
ಕ್ಯಾನ್ ಫಿನ್ ಹೋಮ್ಸ್ ಲಿ.

ನೊಂದಾಯಿತ ಕಛೇರಿ: ನಂ.29/1, 1ನೇ ಮಹಡಿ,
ಸರ್ ಎಮ್.ಎನ್. ಕೃಷ್ಣ ರಾವ್ ರಸ್ತೆ,
ಲಾಲ್‌ಬಾಗ್ ವೆಸ್ಟ್ ಗೇಟ್ ಹತ್ತಿರ,
ಬಸವನಗುಡಿ, ಬೆಂಗಳೂರು 560 004.
E-mail: compsec@canfinhomes.com
ದೂರವಾಣಿ: 080–26564259/ 080–41261144
ಫ್ಯಾಕ್ಸ್: 080–26565746
ವೆಬ್:www.canfinhomes.com
CIN:L85110KA1987PLC008699

# ಸೂಚನೆ

(ಕಂಪನಿಯ ಈಕ್ವಿಟಿ ಷೇರುದಾರರ ಗಮನಕ್ಕೆ)

ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ (ಐಇಪಿಎಫ್) (ಲೆಕ್ಕಪತ್ರ, ಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಗಳು 2016 ಮತ್ತು ತಿದ್ದುಪಡಿ ನಿಯಮ 2017ರ ನಿಯಮ 6 ಅನ್ವಯ 7 ವರ್ಷಗಳ ಕಾಲ ಸ್ವೀಕರಿಸದ ಅಥವಾ ಪಾವತಿಯಾಗದ 2011–12 ಆರ್ಥಿಕ ವರ್ಷದ ಘೋಷಿತ ಲಾಭಾಂಶವನ್ನು ದಿನಾಂಕ: 08/08/2019 ರಂದು ಐಇಪಿಎಫ್ ಖಾತೆಗೆ ಜಮಾ ಮಾಡಲಾಗವುದು. ಸತತ 7 ವರ್ಷಗಳಿಂದ ಲಾಭಾಂಶ ಪಡೆಯದ ಹೂಡಿಕೆದಾರರ ಷೇರುಗಳನ್ನು ಸಹ ಹೇಳಲಾದ ನಿಯಮದಲ್ಲಿ ನಿಗದಿಪಡಿಸಿದಂತೆ ವರ್ಗಾವಣೆ ಮಾಡಲಾಗುವುದು.

ಡಿಪಾಸಿಟರಿ ಕಾಯ್ದೆ 1996ರ ಅಡಿಯಲ್ಲಿ ಅಡಮಾನ ಮಾಡಿದ/ಒತ್ತೆ ಇಟ್ಟಿರುವ ಅಥವಾ ನ್ಯಾಯಾಲಯ/ಟ್ರಿಬ್ಯುನಲ್‌ಗಳು ನಿರ್ದಿಷ್ಟವಾಗಿ ವರ್ಗಾವಣೆಯನ್ನು ನಿರ್ಬಂಧಿಸಿದ ಷೇರುಗಳನ್ನು ವರ್ಗಾವಣೆ ಮಾಡಲಾಗುವುದಿಲ್ಲ.

ಮೇಲೆ ತಿಳಿಸಿದ ನಿಯಮಗಳ ಪ್ರಕಾರ ಷೇರುದಾರರಿಗೆ ಐಇಪಿಎಫ್ ಖಾತೆಗೆ ವರ್ಗಾವಣೆಯಾಗುವ ವಿವರಗಳನ್ನು ಪ್ರತ್ಯೇಕವಾಗಿ ತಿಳಿಸಲಾಗಿದೆ ಹಾಗೂ ನಮ್ಮ ಜಾಲತಾಣದಲ್ಲಿಯೂ ಸಹ ಒದಗಿಸಲಾಗಿದೆ. ಸಂಬಂಧಪಟ್ಟ ಷೇರುದಾರರು ನಮ್ಮ ಜಾಲತಾಣ www.canfinhomes.com ನ 'Investor' ಪುಟದಲ್ಲಿ ತಮ್ಮ ಹೆಸರು, ಫೋಲಿಯೋ ಸಂಖ್ಯೆ ಮತ್ತು ನಗದೀಕರಣ ಮಾಡದಿರುವ ಲಾಭಾಂಶಗಳನ್ನು ದೃಢಪಡಿಸಿಕೊಳ್ಳಬಹುದು. ಷೇರುದಾರರು 2011–12 ಆರ್ಥಿಕ ವರ್ಷ ಮತ್ತು ನಂತರದ ಲಾಭಾಂಶವನ್ನು ಐಇಪಿಎಫ್ ಖಾತೆಗೆ ವರ್ಗಾವಣೆಯಾಗುವ ಮೊದಲು ಪಡೆಯಬೇಕಾಗಿ ಕೋರಲಾಗಿದೆ.

ಸಂಬಂಧಪಟ್ಟ ಷೇರುದಾರರಿಗೆ ತಿಳಿಸುವುದೇನೆಂದರೆ ಭೌತಿಕವಾಗಿ ಹೊಂದಿದ ಷೇರುಗಳನ್ನು ಐಇಪಿಎಫ್ ಖಾತೆಗೆ ವರ್ಗಾಯಿಸುವ ಸಲುವಾಗಿ ಕಂಪನಿಯು ನಕಲು ಷೇರು ಪತ್ರಗಳನ್ನು ನೀಡಿ ವರ್ಗಾಯಿಸಲಾಗುವುದು ನಂತರ ಅಸಲಿ ಷೇರು ಪತ್ರಗಳು ತಂತಾನೇ ರದ್ದುಗೊಳ್ಳುವವು. ಕಂಪನಿಯು ಸಾಂಸ್ಥಿಕ ಕ್ರಿಯೆಯ ಮೂಲಕ ಡಿಪಾಸಿಟರಿಗೆ ನಕಲು ಷೇರು ಪತ್ರವನ್ನು ಡಿಮ್ಯಾಟ್ ರೂಪಕ್ಕೆ ಪರಿವರ್ತಿಸಿ ಐಇಪಿಎಫ್ ಖಾತೆಗೆ ವರ್ಗಾವಣೆ ಮಾಡುತ್ತದೆ. ಡಿಮ್ಯಾಟ್ ರೂಪದಲ್ಲಿ ಹೊಂದಿದ ಸಂಬಂಧಪಟ್ಟ ಷೇರುದಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕಂಪನಿಯು ಸಾಂಸ್ಥಿಕ ಕ್ರಿಯೆಯ ಮೂಲಕ ಡಿಪಾಸಿಟರಿಗೆ ಡಿಮ್ಯಾಟ್ ರೂಪದಲ್ಲಿ ಐಇಪಿಎಫ್ ಖಾತೆಗೆ ವರ್ಗಾವಣೆ ಮಾಡಲು ತಿಳಿಸುತ್ತದೆ.

ನಕಲು ಷೇರು ಪತ್ರಕ್ಕೆ ನೀಡಿಕೆಗೆ ಸಂಬಂಧಿಸಿದಂತೆ ಕಂಪನಿಯ ಜಾಲತಾಣದಲ್ಲಿ ಲಭ್ಯವಿರುವ ಮಾಹಿತಿಯು ಐಇಪಿಎಫ್ ಖಾತೆಗೆ ವರ್ಗಾವಣೆಯ ಸಲುವಾಗಿ ಸಾಕಷ್ಟಾಗಿವೆ ಎಂದು ಪರಿಗಣಿಸಬೇಕು.

**ಕಂಪನಿಯು ಸಂಬಂಧಪಟ್ಟ ಷೇರುದಾರರಿಂದ ಯಾವುದೇ ವಿನಂತಿಯನ್ನು ಸ್ವೀಕರಿಸದಿದ್ದಲ್ಲಿ, ಮೇಲೆ ತಿಳಿಸಿದ ನಿಯಮಗಳನುಸಾರ, ಕಡೆಯ ದಿನವಾದ 08/08/2019 ರಂದು ಷೇರುಗಳನ್ನು ಐಇಪಿಎಫ್‌ಗೆ ವರ್ಗಾವಣೆ ಮಾಡಲಾಗುವುದು. ಸತತ ಏಳು ವರ್ಷಗಳಿಂದ ಲಾಭಾಂಶ ಪಡೆಯದ ಷೇರುಗಳನ್ನೂ ಸಹ ಯಾವುದೇ ಸೂಚನೆ ನೀಡದೆ ವರ್ಗಾವಣೆ ಮಾಡಲಾಗುವುದು.**

ದಯವಿಟ್ಟು ಗಮನಿಸಿ: ಸ್ವೀಕರಿಸದ ಲಾಭಾಂಶ ಮತ್ತು ಐಇಪಿಎಫ್‌ಗೆ ವರ್ಗಾವಣೆಗೊಂಡ ಷೇರುಗಳ ಬಗ್ಗೆ ಕಂಪನಿ ವಿರುದ್ಧ ಯಾವುದೇ ಹೊಣೆಗಾರಿಕೆ ಇರುವುದಿಲ್ಲ. ಷೇರುದಾರರು ಲಾಭಾಂಶ ಮತ್ತು ಐಇಪಿಎಫ್‌ಗೆ ವರ್ಗಾವಣೆಗೊಂಡಿರುವ ಷೇರುಗಳನ್ನು ಐಇಪಿಎಫ್ ಅಧಿಕಾರಿಗಳಿಂದ ನಿಯಮಗಳಲ್ಲಿ ಸೂಚಿಸಿದ ವಿಧಾನವನ್ನು ಅನುಸರಿಸಿದ ನಂತರ ಅಂತಹ ಷೇರುಗಳ ಮೇಲೆ ಹಕ್ಕು ಪಡೆಯಬಹುದು.

ಮೇಲಿನ ವಿಷಯದ ಬಗ್ಗೆ ಯಾವುದೇ ಮಾಹಿತಿ ಬೇಕಿದ್ದಲ್ಲಿ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್, ಕ್ಯಾನ್‌ಬ್ಯಾಂಕ್ ಕಂಪ್ಯೂಟರ್ ಸರ್ವಿಸಸ್ ಲಿಮಿಟೆಡ್‌ನ, ಶ್ರೀ ಬಿ.ಎಸ್. ನಾಯ್ಡು, ಹಿರಿಯ ಅಧಿಕಾರಿ, ದೂರವಾಣಿ: +91 80 23469661 ಗೆ ಸಂಪರ್ಕಿಸಬಹುದು ಅಥವಾ naidu@ccsl.co.in ಅಥವಾ investor.relationship@canfinhomes.com ಗೆ ವಿ–ಅಂಚೆ ಮಾಡಬಹುದಾಗಿದೆ.

ಕ್ಯಾನ್ ಫಿನ್ ಹೋಮ್ಸ್ ಲಿಮಿಟೆಡ್ ಪರವಾಗಿ
ಸಹಿ/–

ಸ್ಥಳ: ಬೆಂಗಳೂರು — ವೀಣಾ ಜಿ. ಕಾಮತ್
ದಿನಾಂಕ: 08/05/2019 — ಕಂಪನಿ ಕಾರ್ಯದರ್ಶಿ